ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1329
ಸದಸ್ಯರ ಹೆಸರು	:	ಶ್ರೀ ಬಸವರಾಜ ಪಾಟೀಲ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	23.09.2021
ಉತ್ತರಿಸುವ ಸಚಿವರು	:	ಮುಖ್ಯ ಮಂತ್ರಿಗಳು

ಕ್ರ. ಸಂ.	ಪ್ರಶ್ನೆಗಳು	ಉತ್ತರ
(ಅ)	ಅನುಚ್ಛೇಧ 371(ಜೆ) ತಿದ್ದುಪಡಿಯಾಗಿ ಎಂಟು ವರ್ಷ ಕಳೆದರೂ ರಾಜ್ಯದ ಯಾವ ಯಾವ ಇಲಾಖೆಗಳಲ್ಲಿ ನೇಮಕಾತಿ, ನಿಯುಕ್ತಿ, ಜೇಷ್ಠತೆ, ಬಡ್ತಿ ಮತ್ತು ವರ್ಗಾವಣೆಗಳನ್ನು ಜಾರಿ ಮಾಡಲಾಗಿದೆ;	ಭಾರತದ ಸಂವಿಧಾನದ ಅನುಚ್ಛೇಧ 371(ಜೆ) ಅನುಷ್ಠಾನಕ್ಕೆ ಸಂಬಧಿಸಿದಂತೆ ಸಾರ್ವಜನಿಕ ಉದ್ಯೋಗದಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ನ್ನು ಹೊರಡಿಸಲಾಗಿದ್ದು, ಸದರಿ ಆದೇಶದ ಕಂಡಿಕೆ 3ರಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿರುವ ರಾಜ್ಯ ಸಿವಿಲ್ ಸೇವಾ ಹುದ್ದೆಗಳ ಪೈಕಿ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಲ್ಲಿ 75%, ಗ್ರೂಪ್-ಸಿ ಹುದ್ದೆಗಳಲ್ಲಿ 80% ಮತ್ತು ಗ್ರೂಪ್-ಡಿ ಹುದ್ದೆಗಳಲ್ಲಿ 85% ಹುದ್ದೆಗಳನ್ನು ಹಾಗೂ ಸದರಿ ಆದೇಶದ ಕಂಡಿಕೆ 13ರಲ್ಲಿ ರಾಜ್ಯ ಮಟ್ಟದ ಕಛೇರಿ ಅಥವಾ ಸಂಸ್ಥೆಗಳಲ್ಲಿ ಎಲ್ಲಾ ವೃಂದದ ಹುದ್ದೆಗಳಲ್ಲಿ 8% ಹುದ್ದೆಗಳನ್ನು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಮೇಲಿನ ಆದೇಶದನ್ವಯ ಬಹುತೇಕ ಎಲ್ಲಾ ಇಲಾಖೆಗಳು /ನಿಗಮ/ ಮಂಡಳಿಗಳು/ಸ್ಥಳೀಯ ಸಂಸ್ಥೆಗಳು/ವಿಶ್ವ ವಿದ್ಯಾಲಯಗಳು/ಸ್ವಾಯತ್ತ ಸಂಸ್ಥೆಗಳು ಸ್ಥಳೀಯ ವೃಂದವನ್ನು ರಚಿಸಿ ಅಧಿಸೂಚನೆಗಳನ್ನು ಹೊರಡಿಸಿದ್ದು, ನಂತರದಲ್ಲಿ ನಿಯಮಾನುಸಾರ ನೇಮಕಾತಿ, ನಿಯುಕ್ತಿ, ಜೇಷ್ಠತೆ, ಬಡ್ತಿ ಮತ್ತು ವರ್ಗಾವಣೆಗಳನ್ನು ಮಾಡುತ್ತಿರುತ್ತವೆ.
(ಆ)	ಜಾರಿ ಮಾಡಿದ್ದಲ್ಲಿ ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ

ಸಂಖ್ಯೆ: ಸಿಆಸುಇ 184 ಹೈಕಕೋ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ